ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:21-10-2021 ರಂದು ಪಾಲಿಕೆಯ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ 2020-21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021. ರಂತೆ ಕ್ರೀಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ನೀಡುವ ಬಗ್ಗೆ ರಚಿಸಲಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಆಯುಕ್ತರು : ಅಧ್ಯಕ್ಷರು
2. ವಿಶೇಷ ಆಯುಕ್ತರು(ಯೋಜನೆ) : ಉಪಾಧ್ಯಕ್ಷರು
3. ವಿಶೇಷ ಆಯುಕ್ತರು(ಘತ್ಯಾನಿ) : ಸದಸ್ಯರು
4. ಪ್ರಧಾನ ಅಭಿಯಂತರರು : ಸದಸ್ಯರು
5. ಮುಖ್ಯ ಲೆಕ್ಕಾಧಿಕಾರಿಗಳು : ಸದಸ್ಯರು
6. ಮುಖ್ಯ ಅಭಿಯಂತರರು(ಯಲಹಂಕ ವಲಯ) : ಸದಸ್ಯ ಕಾರ್ಯದರ್ಶಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರವು 2020-21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021. ರಂತೆ ಕ್ರೀಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಮೌಲ್ಯಮಾಪನಕ್ಕಾಗಿ ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ ಮು.ಅ/ಮ.ಪ/ಪಿ.ಆರ್/26/15-16 ದಿನಾಂಕ: 05-06-2015ರ ಆದೇಶದಂತೆ ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಮೇರೆಗೆ ಮುಖ್ಯ ಅಭಿಯಂತರರು ಯಲಹಂಕ ವಲಯ ರವರು 2020-21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021. ರಂತೆ ಟೆಂಡರ್ ಆಹ್ವಾನಿಸಿರುವ ಪ್ಯಾಕೇಜ್ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ನೀಡಿರುವ ತಾಂತ್ರಿಕ ವರದಿಯನ್ನು ಕ್ರೋಢೀಕರಿಸಿ ಮೌಲ್ಯಮಾಪನಕ್ಕೆ **ವಿಷಯ-07** ರಂತೆ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಿರುತ್ತಾರೆ. ಅದರಂತೆ ಟೆಂಡರ್ ಮೌಲ್ಯಮಾಪನ ಸಮಿತಿಯು ವಿಷಯ- 07 ರ ಪಟ್ಟಿಯ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯು ತೀರ್ಮಾನಿಸಲಾಯಿತು.

ಪು.ತಿ.ನೋ...

ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weightage ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ : No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause -15.2 ಮತ್ತು 3.2 ಬಿ ಪರಿಗಣಿಸಲಾಗಿದೆ.

ವಿಷಯ ಸಂಖ್ಯೆ : 07

ಕ್ರ ಸಂ	ಕಾಮಗಾರಿಯ /ಪ್ಯಾಕೇಜ್ ಕಾಮಗಾರಿಗಳ ಹೆಸರು ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021.	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು	ಅರ್ಹತೆ/ ಅನರ್ಹತೆ ಹೊಂದಿರುವ ವಿವರಗಳು	ಷರಾ
I)	Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden and surrounding areas in ward no -03 of Yelahanka New town Sub division PACKAGE NO-07.	ರೂ.875.0 ಲಕ್ಷಗಳು	Sri B M Rangegowda (BMRG Projects India Pvt Ltd)	KW-4 Standard Tender Document ಅನುಸಾರ ನಿಗಧಪಡಿಸಿರುವಂತೆ Line of Credit ಪ್ರತಿಯನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವುದಿಲ್ಲ.	Technically Dis-Qualified
			Sri G N Ramesh	KW-4 Standard Tender Document ಅನುಸಾರ ನಿಗಧಪಡಿಸಿರುವಂತೆ Line of Credit ಪ್ರತಿಯನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವುದಿಲ್ಲ.	Technically Dis-Qualified
			Sri K Venkataraju	KW-4 Standard Tender Document ಅನುಸಾರ ನಿಗಧಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
			Sri Mohan kumar S R	KW-4 Standard Tender Document ಅನುಸಾರ ನಿಗಧಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
			Sri V Venkataraju	Annual Turn over ಹಾಗೂ Bid Capacity, KW-4 Standard Tender Document ಅನುಸಾರ ನಿಗಧಪಡಿಸಿರುವುದಕ್ಕಿಂತ ಕಡಿಮೆ ಇರುತ್ತದೆ.	Technically Dis-Qualified

ಮು.ತಿ.ನೋ...

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 1-10-2021 ರಂದು ತೆರೆಯಲಾಗಿದ್ದು, ಈ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್‌ದಾರರು ಸಲ್ಲಿಸಿರುವ ***Annual turn over, Work done certificate, Line of Credi, Required Machinery details & Bid Capacity.*** ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ದೃಡೀಕರಿಸಿಕೊಳ್ಳಲಾಗಿರುವುದಾಗಿ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಮತ್ತು ಮುಖ್ಯ ಅಭಿಯಂತರರು ಯಲಹಂಕ ವಲಯರವರು ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಿಳಿಸಿದ್ದು, ಟೆಂಡರ್‌ನಲ್ಲಿ ಭಾಗವಹಿಸಿರುವ ಎಲ್ಲಾ ಗುತ್ತಿಗೆದಾರರ ದಾಖಲಾತಿಗಳನ್ನು ಪರಿಶೀಲಿಸಿ ದೃಡಿಕರಿಸಿರುತ್ತಾರೆ. ಮುಂದುವರೆದು 1) Sri B M Rangegowda (BMRG Projects India Pvt Ltd) 2) Sri G N Ramesh 3) Sri V Venkataraju ರವರನ್ನು KW-4 Standard Tender Document ಅನುಸಾರ ಷರತ್ತುಗಳನ್ನು ಪೂರೈಸದ ಕಾರಣ ಇವರನ್ನು ತಾಂತ್ರಿಕವಾಗಿ ಅನರ್ಹಗೊಳಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ 1) Sri K Venkataraju 2) Sri Mohan kumar S R ರವರು KW-4 Standard Tender Document ಅನುಸಾರ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ತಾಂತ್ರಿಕವಾಗಿ ಅರ್ಹಗೊಳಿಸಲಾಗಿದೆ. ಆದುದರಿಂದ ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಕ್ರಮಕೈಗೊಳ್ಳಲು ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿಯ ಮುಂದೆ ಟಿಪ್ಪಣಿ ಪರಿಶೀಲಿಸಲಾಯಿತು.

ತೀರ್ಮಾನ :

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಸಿದ್ಧಪಡಿಸಿರುವ ತಾಂತ್ರಿಕ ತುಲನಾತ್ಮಕ ಪಟ್ಟಿಯನ್ನು ಅವಲೋಕಿಸಲಾಯಿತು. ಸದರಿ ತುಲನಾತ್ಮಕ ಪಟ್ಟಿಯಂತೆ ಬಿಡ್‌ದಾರರಾದ **1) Sri K Venkataraju 2) Sri Mohan kumar S R** ರವರು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್ಡನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಸಭೆಯು ತೀರ್ಮಾನಿಸಿತು

ಮುಖ್ಯ ಅಭಿಯಂತರರು ಯಲಹಂಕ ವಲಯ (ಸದಸ್ಯ ಕಾರ್ಯದರ್ಶಿ)	ಪ್ರಧಾನ ಅಭಿಯಂತರರು ಬಿಬಿಎಂಪಿ (ಸದಸ್ಯರು)	ಮುಖ್ಯ ಲೆಕ್ಕಾಧಿಕಾರಿ, ಬಿಬಿಎಂಪಿ ಸದಸ್ಯರು.
ವಿಶೇಷ ಆಯುಕ್ತರು (ಹಣಕಾಸು) (ಸದಸ್ಯರು)	ವಿಶೇಷ ಆಯುಕ್ತರು (ಘನ್ಯಾನಿ) (ಸದಸ್ಯರು)	ವಿಶೇಷ ಆಯುಕ್ತರು (ಯೋಜನೆ) (ಉಪಾಧ್ಯಕ್ಷರು)

ಮುಖ್ಯ ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ
ಮೌಲ್ಯಮಾಪನ/ಆರ್ಥಿಕ ಮೌಲ್ಯ
ಮಾಪನ ಮತ್ತು ದರಸಂಧಾನ ಸಮಿತಿ
(ಅಧ್ಯಕ್ಷರು